

# ಹೆಣದೊಟ್ಟಿಗೆ ಸಂಸಾರ

■ ಗೌರಿ

**ವ್ಯಕ್ತಿಯಾಗಲಿ, ಸಂಸ್ಕೃತಿಯಾಗಲಿ ಸತ್ತನಂತರ ಉಳಿಸಿಕೊಳ್ಳುವುದೆಂದರೆ ಹೆಣದ ಜೊತೆ ಸಂಸಾರ ಮಾಡಿದ ಹಾಗೆಯೇ ಎಂಬುದನ್ನು ವಿಡಂಬನಾತ್ಮಕವಾಗಿ ಬಿಂಬಿಸುವ ಕಿರುಚಿತ್ರವಿದು.**

ಅದು ಶ್ರೀಮಂತ ಕುಟುಂಬ. ಗಂಡ ಹೆಂಡತಿ ಮತ್ತು ಇಬ್ಬರು ಮಕ್ಕಳು. ಅರಮನೆಯಂಥ ಬಂಗಲೆ, ಆಳುಕಾಳುಗಳು, ವೈಭೋಗ ಎಲ್ಲವೂ ಇದೆ. ಅಂಥ ಮನೆಯ ಯಜಮಾನ ಸಾಯುತ್ತಾನೆ. 'ತನ್ನ ನಂತರ ತನ್ನ ದೇಹವನ್ನು ಸ್ಟಫ್ಡ್ ಮಾಡಿ ರಕ್ಷಿಸಬೇಕು ಮತ್ತು ಅದನ್ನು ಮನೆಯಲ್ಲಿ ಎಲ್ಲರಿಗೂ ಕಾಣುವ ಹಾಗೇ ಇಟ್ಟುಕೊಂಡಿರಬೇಕು. ಇಲ್ಲದಿದ್ದರೆ ನನ್ನ ಆಸ್ತಿಯ ಯಾವ ಪಾಲೂ ನನ್ನ ಕುಟುಂಬದವರಿಗೆ ದಕ್ಕುವುದಿಲ್ಲ' ಎಂಬುದು ಅವನ ಉಯಿಲು.

ಸತ್ತ ವ್ಯಕ್ತಿಯ ದೇಹವನ್ನು ಎದುರಿನಲ್ಲಿಯೇ ಇಟ್ಟುಕೊಂಡು ದಿನ ಕಳೆಯಬೇಕಾದ ಗಣ್ಯ ಕುಟುಂಬವೊಂದರ ಪಾಡನ್ನು ವಿಡಂಬನಾತ್ಮಕವಾಗಿ ಕಟ್ಟಿಕೊಡುವ ಕಿರುಚಿತ್ರ 'ಫಾದರ್ ಫಿಗರ್ರೈನ್'. ಮ್ಯಾಟ್ ಕಾಜ್‌ಮನ್ ನಿರ್ದೇಶನದ ಹದಿನೇಳು ನಿಮಿಷದ ಕಿರುಚಿತ್ರ ಕಥನದಲ್ಲಿನ ವಿಡಂಬನೆಯ ಮೂಲಕ ಮಾತ್ರವಲ್ಲ, ಕಟ್ಟೋಣದ ಭಿನ್ನ ವಿನ್ಯಾಸದ ಮೂಲಕವೂ ಹಲವು ಅರ್ಥ ಸಾಧ್ಯತೆಗಳನ್ನು ಹೊಳೆಯಿಸುವ ಹಾಗಿದೆ.

ಅಮ್ಮ ಮಕ್ಕಳು ಊಟಕ್ಕೆ ಕೂತಿದ್ದಾರೆ. ಎದುರಿಗೆ ಅಪ್ಪನ, ಒಣಗಿಸಿಟ್ಟ ಹೆಣವೂ ಕುರ್ಚಿಯ ಮೇಲೆ ಕೂತಿದೆ. 'ಇದು ಹೊಸ ರೆಸಿಪಿ. ತಿನ್ನಿ' ಎಂದು ಅಮ್ಮ ಮಕ್ಕಳಿಗೆ ಹೇಳುತ್ತಾರೆ. ಆದರೆ ತುತ್ತು ಗಂಟಲಲ್ಲಿ ಇಳಿಯುವುದೇ? ಮಗಳು ಅಮ್ಮನಲ್ಲಿ ಹೇಳುತ್ತಾಳೆ: 'ಅಪ್ಪ ಬದುಕಿದ್ದಾಗ ನಮ್ಮ ಬಗ್ಗೆ ಯಾವ ಕಾಳಜಿಯನ್ನೂ ತೋರಿಸಲಿಲ್ಲ. ಈಗ ಸತ್ತ ಮೇಲೆ ಬಲವಂತದಿಂದ ನಮ್ಮಿಂದ ಪ್ರೀತಿಸಿಕೊಳ್ಳಲು ಬಯಸುತ್ತಿದ್ದಾನೆ, ರೇಪಿಸ್ಟ್‌ನಂತೆಯೇ'.



ಹೆಸರು: ಫಾದರ್ ಫಿಗರ್ರೈನ್ (ಇಂಗ್ಲಿಷ್)
ನಿರ್ದೇಶನ: ಮ್ಯಾಟ್ ಕಾಜ್‌ಮನ್
ನಿರ್ಮಾಣ: ಬೆನ್ ಆಲ್ಟರ್‌ಸ್ಕ್ಯೂ, ಜೋಷ್, ಶೇರ್ಟ್‌ಆಫ್
ಸಂಗೀತ: ಅಲಿ ಹೆಲ್ನವೇನ್
ಛಾಯಾಗ್ರಹಣ: ರೇಯ್ನ್ ನೇಥೆರಿ
ತಾರಾಗಣ: ಆ್ಯಮಿ ಲ್ಯಾಂಡೇಕರ್, ಕ್ಯಾಥೆರೀನ್ ರೇಸ್, ರೇಯಾನ್ ಪೌಸ್ಟ್

ಆರೇಳು ವರ್ಷದ ಮಗ, ಅಪ್ಪನ ಹೆಣವನ್ನು ಸೋಫಾದ ಮೇಲೆ ಕೂಡಿಸಿಕೊಂಡು ಮಾತಾಡುತ್ತಿದ್ದಾನೆ. 'ಬದುಕಿದ್ದಾಗಲೂ ನೀನು ನನ್ನೊಂದಿಗೆ ಸರಿಯಾಗಿ ಮಾತಾಡುತ್ತಿರಲಿಲ್ಲ. ಈಗಲೂ ಮಾತಾಡುತ್ತಿಲ್ಲ. ನೀನು ಕೆಟ್ಟ ಮನುಷ್ಯ ಎಂದು ಎಲ್ಲರೂ ಹೇಳುತ್ತಾರೆ. ಅದು ನಿಜವಾ? ಅಲ್ಲ ಎಂದು ಹೇಳಲಾದರೂ ಮಾತಾಡು. ನನ್ನ ಮಾತು ನಿಂಗೆ ಕೇಳಿಸ್ತಿದೆಯಾ? ಕೇಳಿಸಲಿ ಎಂದು ನಾನು ಬಯಸುತ್ತೇನೆ' ಹೀಗೆ ಹೇಳುತ್ತ ಅಪ್ಪನ ಗದ್ದ ಅಲ್ಲಾಡಿಸುತ್ತಾನೆ. ಅಲ್ಲಾಡಿಸಿದಾಗ ಗದ್ದ ಕಿತ್ತು ನೆಲಕ್ಕುದುರುತ್ತದೆ. ಆ ಕುಟುಂಬದ ಯಾರಿಗೂ ಯಜಮಾನನ ಬಗ್ಗೆ ಆದರವಿಲ್ಲ. ಹಾಗೆ ನೋಡಿದರೆ ಅವನ ಸಾವು ಅವರಿಗೆ ಬಿಡುಗಡೆ. ಆದರೆ ಒಲ್ಲದ ಯಜಮಾನನ ಹೆಣವನ್ನು (ಅದು ಭಗ್ನಗೊಂಡರೂ ಮತ್ತೆ ತೇಪೆ ಹಾಕಿ) ಉಳಿಸಿಕೊಳ್ಳಬೇಕಾದ ಅನಿವಾರ್ಯ ಅವರಿಗೆ.

ಶಾಶ್ವತನಾಗಬೇಕು ಎಂಬ ಮನುಷ್ಯನ ಬಯಕೆ ಮತ್ತು ಆ ಬಯಕೆಯಲ್ಲಿಯೇ ಇರುವ ಹುಸಿತನ ಎರಡನ್ನೂ ಈ ಕಿರುಚಿತ್ರ ತುಂಬ ಗಾಢವಾಗಿ ಬಿಂಬಿಸುತ್ತದೆ. ಇರುವಾಗ ಎಲ್ಲರ ಮೇಲೂ ದಬ್ಬಾಳಿಕೆ ನಡೆಸಿದ ವ್ಯಕ್ತಿ ಸತ್ತ ಮೇಲೆ ಜನರು ತನ್ನನ್ನು ಪ್ರೀತಿಸಬೇಕು ಎಂದು ಬಯಸುವುದು ಹೆಣವನ್ನು ಜೊತೆಗಿಟ್ಟುಕೊಂಡು ಬದುಕುವಷ್ಟೇ ಅಸಹಜವಲ್ಲವೇ?

ಈ ಕಿರುಚಿತ್ರದ ಬಹುತೇಕ ದೃಶ್ಯಗಳು ಕಟ್ಟು ಹಾಕಿಸಿಟ್ಟ ಫೋಟೊ ಫ್ರೇಮಿನ ಹಾಗೆ ಕಾಣಿಸುವಂತೆ ವಿನ್ಯಾಸ ಮಾಡಿದ್ದಾರೆ ನಿರ್ದೇಶಕರು. ಮನುಷ್ಯನ ಶಾಶ್ವತಗೊಳ್ಳುವ ದುರಾಸೆಯಲ್ಲಿಯೇ ಇರುವ ಕೃತಕಗುಣವನ್ನೂ ಆ ದೃಶ್ಯಸಂಯೋಜನೆ ಶಕ್ತವಾಗಿ ಅಭಿವ್ಯಕ್ತಿಗೊಳಿಸುತ್ತದೆ. ಚಿತ್ರದ ಕೊನೆಯ ದೃಶ್ಯದಲ್ಲಿ ಇದು ಇನ್ನಷ್ಟು ಸ್ಪಷ್ಟಗೊಳ್ಳುತ್ತದೆ. ಮಗ ಮುರಿದ ಗದ್ದ, ಮಗಳು ಮುರಿದ ಕತ್ತು, ಹೆಂಡತಿ ಧ್ವಂಸಗೊಳಿಸಿದ ಮುಖ ಇವೆಲ್ಲವೂ ಮತ್ತೆ ತೇಪೆ ಹಚ್ಚಿಕೊಂಡು ಹೆಣದ ಸ್ವಸ್ಥಾನದಲ್ಲಿವೆ. ಅದರ ಪಕ್ಕ ನಿಂತುಕೊಂಡು ಸುಂದರವಾಗಿ ಅಲಂಕರಿಸಿಕೊಂಡು ನಗುನಗುತ್ತ ನಿಂತಿರುವ ಫೋಟೊವನ್ನು ಫೋಟೊಗ್ರಾಫರ್ ತೆಗೆಯುತ್ತಾನೆ.

ಯಾವುದೋ ಚಿತ್ರದಲ್ಲಿ ನಾವು ಸೆರೆಯಾಗುತ್ತೇವೆ ಎಂದಾಕ್ಷಣ ನಮ್ಮ ಅರಿಷಡ್ವರ್ಗದ ವಿಕಾರಗಳನ್ನೆಲ್ಲ ಬಚ್ಚಿಟ್ಟುಕೊಂಡು, ಕೃತಕವಾದ ನಗುವಿನ ಪೋಷಾಕು ತೊಟ್ಟು ನಿಂತುಬಿಡುತ್ತೇವಲ್ಲವೇ? ಶಾಶ್ವತವಾಗಿರುವ ಚಿತ್ರದಲ್ಲಿ ನಾವು ಯಾವಾಗಲೂ ಇರುವ ಹಾಗೆ ಕಾಣಿಸಲು ಯಾರೂ ಬಯಸುವುದಿಲ್ಲ. ಬೇರೆಯದೇ ಏನೋ ಆಗಿ, ಜನಮೆಚ್ಚುವ ಹಾಗೆ ಬಿಂಬಿಸಿಕೊಳ್ಳಲು ಬಯಸುತ್ತೇವಲ್ಲವೇ? ಆ ಬಯಕೆಯಲ್ಲಿಯೇ ಇರುವ ಅಸಹಜತೆ ಛಾಯಾಚಿತ್ರಗಳಲ್ಲಿಯೂ ಪಡಿಮೂಡುತ್ತದೆ.

ಇದನ್ನು ವ್ಯಕ್ತಿಗೂ, ಸಮುದಾಯಕ್ಕೂ, ಸಂಸ್ಕೃತಿಗೂ ಅನ್ವಯಿಸಿಕೊಂಡು ನೋಡಬಹುದು. ನಮಗೆ ಸ್ವಾಭಾವಿಕವಲ್ಲದ ಅಸಹಜ ಮುಖವಾಡ ತೊಡುವುದು ಎಂದರೆ (ಅದರೊಟ್ಟಿಗೇ ಹಿಂದೊಮ್ಮೆ ನಾವು ಬದುಕಿದ್ದಿದ್ದರೂ ಸಹ) ಹೆಣವನ್ನು ಜೊತೆಯಲ್ಲಿಟ್ಟುಕೊಂಡ ಹಾಗೆಯೇ ಅಲ್ಲವೇ?

ಈ ಕಿರುಚಿತ್ರ ವೀಕ್ಷಣೆಗೆ **bit.ly/2MoAyDV** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.